ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ (ರಿ), ದಾವಣಗೆರೆ.


SJJES
ಸ್ಥಾಪನೆ- 1962

# ವಿದ್ಯಾವರಣ

ವಿಶೇಷ ಪುರವಣಿ ಮಕ್ಕಳ ಮಾಸಪತ್ರಿಕೆ

ದಿನಾಂಕ : 14/03/2026 : www.sjjes.ac.in : info@sjjes.ac.in : +91.8192.277698

## ಜಿ.ವಿ.ಸಿ.ಹೆಚ್.ಪಿ.ಎಸ್. ಮತ್ತು ಹೆಚ್.ಎಸ್. ಶಾಲೆಯಲ್ಲಿ ವಿಜ್ಞಾನ ದಿನಾಚರಣೆ









ವಿಜ್ಞಾನವು ಮನುಷ್ಯನ ಜೀವನದ ಅವಿಭಾಜ್ಯ ಅಂಗವಾಗಿದೆ. ಭಾರತದಲ್ಲಿ ಪ್ರತಿ ವರ್ಷ ಫೆಬ್ರವರಿ 28ರಂದು" ರಾಷ್ಟ್ರೀಯ ವಿಜ್ಞಾನ ದಿನ" ಅತ್ಯಂತ ಸಡಗರದಿಂದ ಆಚರಿಸಲಾಗುತ್ತದೆ. ದೇಶದ ಜನರಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದು ಮತ್ತು ವಿಜ್ಞಾನದ ಮಹತ್ವವನ್ನು ಸಾರುವುದು ಈ ದಿನದ ಮುಖ್ಯ ಉದ್ದೇಶವಾಗಿದೆ.

ಭಾರತದ ಖ್ಯಾತ ಭೌತವಿಜ್ಞಾನಿ ಸರ್ ಸಿ.ವಿ.ರಾಮನ್ ಅವರು 1928 ಫೆಬ್ರವರಿ 28 ರಂದು ತಮ್ಮ ಪ್ರಸಿದ್ಧ "ರಾಮನ್ ಎಫೆಕ್ಟ್" ಆವಿಷ್ಕಾರವನ್ನು ಜಗತ್ತಿಗೆ ಸಾರಿದರು. ಈ ಅದ್ಭುತ ಸಾಧನೆಗಾಗಿ ಅವರಿಗೆ 1930ರಲ್ಲಿ ಭೌರಶಾಸ್ತ್ರ ವಿಭಾಗದಲ್ಲಿ ನೊಬೆಲ್ ಪ್ರಶಸ್ತಿ ಲಭಿಸಿತು. ಈ ಐತಿಹಾಸಿಕ ದಿನದ ನೆನಪಿಗಾಗಿ 1987 ರಿಂದ ಪ್ರತಿ ವರ್ಷ ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಗುತ್ತದೆ.

ಪ್ರತಿವರ್ಷ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಒಂದು ನಿರ್ದಿಷ್ಟ ವಿಷಯದ ಆಧಾರದ ಮೇಲೆ ಈ ದಿನವನ್ನು ಆಚರಿಸುತ್ತದೆ. 2026ರ ರಾಷ್ಟ್ರೀಯ ವಿಜ್ಞಾನ ದಿನವು "ಸುಸ್ಥಿರ ಭವಿಷ್ಯಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನ" ಎಂಬ ವಿಷಯದ ಮೇಲೆ ಗಮನಹರಿಸುತ್ತದೆ. ಇದು ನಾವೀನ್ಯತೆ ಮತ್ತು ಜಾಗತಿಕ ಯೋಗಕ್ಷೇಮವನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ.

**ಆಚರಣೆಯ ಉದ್ದೇಶಗಳು**




- ದೈನಂದಿನ ಜೀವನದಲ್ಲಿ ವಿಜ್ಞಾನ: ವಿಜ್ಞಾನವು ನಮ್ಮ ಜೀವನವನ್ನು ಹೇಗೆ ಸುಧಾರಿಸಿದೆ ಎಂಬುದನ್ನು ಜನಸಾಮಾನ್ಯರಿಗೆ ತಿಳಿಸುವುದು.
- ವೈಜ್ಞಾನಿಕ ಮನೋಭಾವ: ಮೂಢನಂಬಿಕೆಗಳನ್ನು ತೊರೆದು ತಾರ್ಕಿಕ ಚಿಂತನೆಯನ್ನು ಬೆಳೆಸಿಕೊಳ್ಳಲು ಪ್ರೇರೇಪಿಸುವುದು.
- ವಿದ್ಯಾರ್ಥಿಗಳಿಗೆ ಪ್ರೋತ್ಸಾಹ: ಯುವ ಪೀಳಿಗೆಯಲ್ಲಿ ಸಂಶೋಧನೆ ಮತ್ತು ಆವಿಷ್ಕಾರಗಳ ಬಗ್ಗೆ ಕುತೂಹಲ ಮೂಡಿಸುವುದು.ವಿಜ್ಞಾನವು ಪ್ರಗತಿಯೇ ದೇಶದ ಪ್ರಗತಿ. ರಾಷ್ಟ್ರೀಯ ವಿಜ್ಞಾನ ದಿನವು ಕೇವಲ ಒಂದು ದಿನದ ಆಚರಣೆಯಾಗದೇ ನಮ್ಮ ದೈನಂದಿನ ಬದುಕಿನಲ್ಲೀ ವಿಜ್ಞಾನವನ್ನು ಅಳವಡಿಸಿಕೊಳ್ಳುವ ಸಂಕಲ್ಪವಾಗಲಿ. ವಿಜ್ಞಾನದ ಮೂಲಕ ನಾವು ಸುಸ್ಥಿರ ಮತ್ತು ಸಮೃದ್ಧ ಭಾರತವನ್ನು ನಿರ್ಮಿಸೋಣ.

**ಛಾಯಾ ಎಂ.ಜಿ. 7ನೇ ತರಗತಿ ಜಿ.ವಿ.ಸಿ.ಹೆಚ್.ಪಿ.ಎಸ್.(ಆ.ಮಾ.)**

# ರಾಷ್ಟ್ರೀಯ ವಿಜ್ಞಾನ ದಿನ





- ಪ್ರತಿವರ್ಷ ಫೆಬ್ರವರಿ 28 ರಂದು ರಾಷ್ಟೀಯ ವಿಜ್ಞಾನ ದಿನವನ್ನು ಆಚರಣೆ ಮಾಡಲಾಗುತ್ತದೆ.
- ವಿಜ್ಞಾನದ ಮಹತ್ವವನ್ನು ತಿಳಿಸಲು ಈ ದಿನದ ಆಚರಣೆಯನ್ನು ಮಾಡಲಾಗುತ್ತದೆ.
- ನಮ್ಮ ಭಾರತದ ಪ್ರಖ್ಯಾತ ಭೌತವಿಜ್ಞಾನಿ ಸಿ.ವಿ. ರಾಮನ್ ರವರು ಮಾಡಿದ ಸಾಧನೆಯ ನೆನಪಿಗೆ ಈ ದಿನವನ್ನು ಅಚರಿಸಲಾಗುತ್ತದೆ.
- ಸಿ.ವಿ.ರಾಮನ್ ರವರು 1928 ಫೆಬ್ರವರಿ 28 ರಂದು ರಾಮನ್ ಎಫೆಕ್ಟ್ ಎಂಬ ಅಧ್ಯಯನದ ವಿವರವನ್ನು ಜಗತ್ತಿಗೆ ತಿಳಿಸಿದರು ಹಾಗಾಗಿ ಈ ದಿನವನ್ನು ರಾಷ್ಟ್ರೀಯ ವಿಜ್ಞಾನ ದಿನವನ್ನಾಗಿ ಆಚರಿಸಲಾಗುತ್ತದೆ.
- ಪ್ರತಿವರ್ಷ ಒಂದೊಂದು ಥೀಮ್‌ನೊಂದಿಗೆ ಈ ದಿನವನ್ನು ಆಚರಿಸಲಾಗುತ್ತದೆ. ಈ 2023ರ ಥೀಮ್ "ಜಾಗತಿಕ ಯೋಗಕ್ಷೇಮಕ್ಕಾಗಿ ಜಾಗತಿಕ ವಿಜ್ಞಾನ"
- ರಾಮನ್ ಎಫೆಕ್ಟ್ ಯಾವುದೇ ಪಾರದರ್ಶಕ ರಾಸಾಯನಿಕ ವಸ್ತುವಿನ ಮೂಲಕ ಬೆಳಕನ್ನು ಹಾಯಿಸಿದಾಗ ಅದರಿಂದ ಹೊರ ಬರುವ ಕಿರಣಗಳು ಒಷಬರುವ ಕಿರಣಗಳಿಗಿಂತ ಭಿನ್ನವಾದ ದಿಕ್ಕಿನಲ್ಲಿ ಹೋಗುತ್ತವೆ. ಇದನ್ನೇ ರಾಮನ್ ಎಫೆಕ್ಟ್ ಅಥವಾ ರಾಮನ್ ಪರಿಣಾಮ ಎನ್ನುವರು.
- ಸಿ.ವಿ.ರಾಮನ್‌ರವರು ರಾಮನ್ ಪರಿಣಾಮಕ್ಕೆ 1930 ರಲ್ಲಿ ನೋಬಲ್ ಪ್ರಶಸ್ತಿಯನ್ನು ಪಡೆದಿದ್ದರು.
- ಸಿ.ವಿ. ರಾಮನ್ ರವರು ವಿಜ್ಞಾನ ಕ್ಷೇತ್ರದಲ್ಲಿ ಏಷ್ಯಾದಲ್ಲಿ ನೋಬಲ್ ಪ್ರಶಸ್ತಿ ಪಡೆದ ಮೊಟ್ಟ ಮೊದಲಿಗರು.
- ಸಿ.ವಿ.ರಾಮನ್‌ರವರು ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ, ಮುಂದೆ ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ಸೈನ್ಸ್ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು.
- ಈ ದಿನ ಶಾಲಾ ಕಾಲೇಜುಗಳಲ್ಲಿ ಪ್ರಬಂಧ, ರಸಪ್ರಶ್ನೆ, ಸೆಮಿನಾರ್ ಮುಂತಾದ ಕಾರ್ಯಕ್ರಮಗಳ ಮೂಲಕ ವಿಜ್ಞಾನದ ಮಹತ್ವವನ್ನು ತಿಳಿಸುತ್ತಾರೆ ಮತ್ತು ವೈಜ್ಞಾನಿಕವಾಗಿ ಯೋಚಿಸಲು ಮಾರ್ಗದರ್ಶನವನ್ನು ನೀಡಲಾಗುತ್ತದೆ.
- 2026ರ ರಾಷ್ಟೀಯ ವಿಜ್ಞಾನದ ಮುಖ್ಯ ವಿಷಯ" ವಿಜ್ಞಾನದಲ್ಲಿ ಮಹಿಳೆಯರು ವಿಕಸಿತ ಭಾರತವನ್ನು ಉತ್ತೇಜಿಸುವುದಾಗಿದೆ."




**ಖುಷಿ ಪಿ. 7ನೇ ತರಗತಿ ಜಿ.ವಿ.ಸಿ.ಹೆಚ್.ಪಿ.ಎಸ್.(ಕ.ಮಾ.)**

# ರಾಷ್ಟ್ರೀಯ ವಿಜ್ಞಾನ ದಿನ





ಶ್ರೀ ವೀರಭದ್ರಪ್ಪ ಎಂ ಚಿಗಟೇರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಂದ ದಿನಾಂಕ 28 .02. 2026ರಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಪ್ರಯುಕ್ತ ವಿಜ್ಞಾನ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿತ್ತು . ಈ ವಸ್ತು ಪ್ರದರ್ಶನದಲ್ಲಿ 5ನೇ ತರಗತಿ 6ನೇ ತರಗತಿ 7ನೇ ತರಗತಿ ಹಾಗೂ ಎಂಟನೇ ತರಗತಿ ಕನ್ನಡ ಮತ್ತು ಆಂಗ್ಲ ಮಾಧ್ಯಮದ ವಿದ್ಯಾರ್ಥಿಗಳು ಭಾಗವಹಿಸಿದ್ದರು.ಈ ವಸ್ತು ಪ್ರದರ್ಶನದಲ್ಲಿ ನೀರಿನ ಶುದ್ಧೀಕರಣ ವಾಯುಮಾಲಿನ್ಯ ಸೋಲಾರ್ ಸಿಸ್ಟಮ್ ಜ್ವಾಲಾಮುಖಿ ಮಾನವನ ಹೃದಯ ಶ್ವಾಸಕೋಶ ಕಿವಿ ಕಣ್ಣು ಇನ್ನು ಮುಂತಾದ ಚಾರ್ಟ್ ಗಳು  ಪ್ಲಾಸ್ಟಿಕ್ ಮುಕ್ತ ಪರಿಸರ ಪ್ಲಾಸ್ಟಿಕ್ ಭೂತವನ್ನು ತಯಾರಿಸಿದ್ದರು. ಹಾಗೂ ಇನ್ನು ಮುಂತಾದ ಮಾದರಿಗಳನ್ನು ತಯಾರಿಸಿದ್ದರು. ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು ಈ ಕಾರ್ಯಕ್ರಮದಲ್ಲಿ ಎಲ್ಲಾ ವಿದ್ಯಾರ್ಥಿಗಳು ಶಿಕ್ಷಕರು ಮುಖ್ಯೋಪಾಧ್ಯಾಯರು ಭಾಗವಹಿಸಿದ್ದರು.

# ವಿಶ್ವ ಮಾತೃಭಾಷಾ ದಿನ – ಫೆಬ್ರವರಿ 21

## ಕನ್ನಡ ಕನ್ನಡ ಎನೆ ಸವಿಗನ್ನಡ
## ಕನ್ನಡ ಎನೆ ಕುಣಿದಾಡುವುದೆನ್ನದೆ

ಕನ್ನಡ ಎನೆ ಕಿವಿ ನಿಮಿರುವನ್ನದು - ಕುವೆಂಪು ರವರ ಈ ನಮ್ಮ ಕನ್ನಡ ಕುರಿತಾದ ರೋಮಾಂಚನ ಅಬ್ಬಾ! ಅದೆಂತಹ ಉಲ್ಲಾಸದ ಮಾತಿನ ಸಾಲುಗಳಾಗಿವೆ. ಮಾತೃಭಾಷೆಯೇ ಅಂತದು. ಮನುಜ ಹುಟ್ಟಿದಾಗಿನಿಂದ ತೊದಲು ನುಡಿಯ ಜೊತೆಗೆ ಕಲಿತ ಮೊದಲ ಭಾಷೆ, ತಾನೇ ತಾನಾಗಿ ಬಾಯಿಯಿಂದ ಹೊರಡುವ ಭಾಷೆ ಮಾತೃಭಾಷೆ. ಯಾರೂ ಕಲಿಸಬೇಕಿಲ್ಲದ ಭಾಷಾ ಮಾಧ್ಯಮವೇ ಈ ನಮ್ಮ ಕನ್ನಡ ಭಾಷೆ. ಫೆಬ್ರವರಿ ವಿಶ್ವ ಮಾತೃಭಾಷಾ ದಿನ. ನಮ್ಮ ನರನಾಡಿಗಳಲ್ಲೇ ಬೆರೆತಿರುವ ಮಾತೃಭಾಷೆಗೆ ದಿನವೂ ದಿನಾಚರಣೆ ಆಗಿರಲಿ.

ಮಾತೃಭಾಷೆಯೊಂದಿಗೆ ನಾಡಿನ ವೈವಿಧ್ಯಮಯ ಸಂಸ್ಕೃತಿ ಈ ಸಮುದ್ರದಂತಿರುವ ಸಾಹಿತ್ಯ ನಮ್ಮ ಕನ್ನಡಿಗರ ಜನಪದ ಹಸೆಯುಂತಿರುವ ಪ್ರಾಚೀನ ಕಲೆಗಳೊಂದಿಗೆ ಆಧುನಿಕ ಶೈಲಿ ಸಂಗೀತ ಈ ಎಲ್ಲಾ ಸಾಂಸ್ಕೃತಿಕ ವೈಭವವೂ ನಾಡು–ನುಡಿಯೊಂದಿಗೆ ಸುಲಭವಾಗಿ ಸಮ್ಮಿಳಿತಗೊಂಡು ಆ ಹಸಿರಿನ ಉಸಿರನ್ನೇ ಸುಲಭವಾಗಿ ತಲುಪುತ್ತವೆ.

# ಫೆಬ್ರವರಿ 28 ರಾಷ್ಟ್ರೀಯ ವಿಜ್ಞಾನ ದಿನಾಚರಣೆ:



ಶ್ರೀ ಜಗದಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯಲ್ಲಿ ದಿನಾಂಕ:28–2–2026 ರಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಅಂಗವಾಗಿ ವಿಜ್ಞಾನ ವಸ್ತು ಪ್ರದರ್ಶನ ನಡೆಸಲಾಗಿತ್ತು. ಪ್ರಾಥಮಿಕ ಮತ್ತು ಪ್ರೌಢಶಾಲಾ ಹಂತದಲ್ಲಿ ಸುಮಾರು 20ಕ್ಕೂ ಹೆಚ್ಚಿನ ವಿಜ್ಞಾನ ಮಾದರಿಗಳನ್ನು ಪ್ರದರ್ಶಿಸಲಾಗಿತ್ತು. ಈ ಒಂದು ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಎಲ್ಲರ ಗಮನ ಸೆಳೆದ ಪರಿಸರ ನಾಶ ಮಾಡುತ್ತಿರುವ ಪ್ಲಾಸ್ಟಿಕ್ ಕವರ್‌ಗಳನ್ನು ಬಳಸಿ ಭೂತದ ಮಾದರಿಯಲ್ಲಿ ಅನಾವರಣಗೊಳಿಸಿದ್ದು ವಿಶೇಷ ಗಮನ ಸೆಳೆಯಿತು. ಉಳಿದಂತೆ ಕೃಷಿಯಲ್ಲಿ ಹೆಚ್ಚು ಆದಾಯ ಗಳಿಸುವುದು, ಮುಂದುವರೆದ ನಗರಗಳ ಮಾದರಿ, ಸೋಲಾರ್‌ನ ಹೈಟೆಕ್ ಮಾದರಿಗಳು ವಸ್ತು ಪ್ರದರ್ಶನದಲ್ಲಿ ಆಕರ್ಷಕವಾಗಿದ್ದವು. ಜೊತೆಗೆ ವಿಜ್ಞಾನ ಚಿತ್ರಗಳನ್ನು ರಂಗೋಲಿಯಲ್ಲಿ ಚಿತ್ರಿಸಲಾಗಿತ್ತು. ಇದು ತುಂಬಾ ಆಕರ್ಷಕವಾಗಿತ್ತು.ಈ ಶಾಲಾ ವಸ್ತು ಪ್ರದರ್ಶನದಲ್ಲಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಎಸ್ ನಾಗರಾಜ, ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕಿ ಶೈಲಜಾ ಹಾಗೂ ಹಿರಿಯ ಶಿಕ್ಷಕಿಯಾದ ಹೆಚ್ ಬಿ ಜ್ಯೋತಿ ಹಾಗೂ ಇತರ ಶಿಕ್ಷಕವೃಂದವರು ಉಪಸ್ಥಿತರಿದ್ದರು.

# ಮಾರ್ಚ್ 3 ಪುಟ್ಟರಾಜ ಗವಾಯಿಗಳ ಜನ್ಮ ದಿನಾಚರಣೆ:

ಡಾ. ಪಂಡಿತ ಪುಟ್ಟರಾಜ ಗವಾಯಿಗಳು ಸಂಗೀತ ಲೋಕದ ದಿಗ್ಗಜರು. ಇವರು ಸಂಗೀತ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಅಪಾರ. ಸಾವಿರಾರು ಅಂಧ ಮಕ್ಕಳ ಬಾಳಿಗೆ ನಂದಾದೀಪವಾಗಿದ್ದರು. ಪುಟ್ಟರಾಜ

ಗವಾಯಿಗಳು ಮಾರ್ಚ್ 3, 1914 ರಂದು ಹಾವೇರಿ ಜಿಲ್ಲೆಯ ದೇವಗಿರಿ ಗ್ರಾಮದಲ್ಲಿ ಜನಿಸಿದರು. ತಂದೆ ರೇವಣ್ಣಯ್ಯ ಮತ್ತು ತಾಯಿ ಸಿದ್ದಮ್ಮ. ಇವರ ಮೂಲ ಹೆಸರು ಪುಟ್ಟಯ್ಯಜ್ಜ. ಪುಟ್ಟರಾಜ ಗವಾಯಿಗಳು ಗುರು ಕುಮಾರೇಶ್ವರ ಕೃಪಾ ಪೋಷಿತ ನಾಟ್ಯ ಕಂಪನಿಯನ್ನು ಸ್ಥಾಪಿಸಿದರು. ಇದು ಅಂಗವಿಕಲರಿಗೆ ಮತ್ತು ಅನಾಥರಿಗೆ ಉಚಿತ ಆಹಾರ, ಆಶ್ರಯ ಹಾಗೂ ಶಿಕ್ಷಣವನ್ನು ಒದಗಿಸಲು ಹಣವನ್ನು ಸಂಗ್ರಹಿಸಲು ನೆರವಾಯಿತು. ಅಷ್ಟೇ ಅಲ್ಲದೆ, ಇವರು ರಂಗಭೂಮಿ ಸಂಸ್ಕೃತಿಯನ್ನು ವಿಶಿಷ್ಟವಾಗಿ ಪಸರಿಸಿದರು. ಈ ಮೂಲಕ ತಮ್ಮ ಜೀವನವನ್ನೇ ಸಮಾಜಕ್ಕಾಗಿ ಅರ್ಪಣೆ ಮಾಡಿದರು. ಸಂಗೀತದ ಜೊತೆಗೆ ಸಂಸ್ಕೃತ, ಹಿಂದಿ, ಕನ್ನಡ ಭಾಷೆಯನ್ನು ಕಲಿತರು. ಕೀರ್ತನೆಗಳನ್ನು ಬ್ರೈಲ್ ಲಿಪಿಯ ಮೂಲಕ ಕಲಿತರು. ತಮ್ಮ ಜೀವನವನ್ನೇ ಗುರುಸೇವೆಗಾಗಿ ಮುಡಿಪಾಗಿಟ್ಟಿದ್ದರು.

# ಮಕ್ಕಳ ಕೈ–ತೋಟದಲ್ಲಿ ಬೆಳೆದ ತರಕಾರಿ:



# ಜಿ.ಎಸ್.ಎಸ್ ಜನ್ಮ ಶತಮಾನೋತ್ಸವ ನಾಟಕ :








ನಗರದ ಅನ್ವೇಷಕರು ಆರ್ಟ್ಸ್ ಫೌಂಡೇಶನ್ ರಂಗವೇದಿಕೆ ಹಾಗೂ ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಗಳ ಸಯುಕ್ತ ಆಶ್ರಯದಲ್ಲಿ ಡಾ.ಜಿ ಎಸ್ ಶಿವರುದ್ರಪ್ಪ ಅವರ ಜನ್ಮ ಶತಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ಸ್ಥಳೀಯ ವಿನೋಬನಗರದ ಶ್ರೀ ಜ ಜ ಮುರುಘರಾಜೇಂದ್ರ ಪ್ರೌಢಶಾಲೆಯ ಆವರದ ಶ್ರೀಮತಿ ಸುರೇಖಾ ವೀರಣ್ಣ ಕಲಾಮಂದಿರದಲ್ಲಿ ವಿದ್ಯಾರ್ಥಿಗಳಿಂದ ನಾಟಕ ಪ್ರದರ್ಶನ ನಡೆಯಿತು. ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಮನೋಹರ್ ಎಸ್ ಚಿಗಟೇರಿ ಮಾತನಾಡಿ ನಾಟಕಗಳು ಮಕ್ಕಳಲ್ಲಿ ಓದುವ ಕಲೆ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿರುತ್ತವೆ ಎಂದರು.

ನಂತರ ಶಂಭುಲಿಂಗಪ್ಪ ಕೊಟ್ಟೂರು ಅವರ ನಿರ್ದೇಶನದಲ್ಲಿ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯ ವಿದ್ಯಾರ್ಥಿಗಳು **'ಹಾಡು ಹಕ್ಕಿ'** ನಾಟಕವನ್ನು ಪ್ರದರ್ಶಿಸಿದರು. ಶ್ರೀ ರುದ್ರೇಶ್‌ಮೂರ್ತಿ ಕೆ ಪಿ ಸಹ ಶಿಕ್ಷಕರು ನಿರ್ದೇಶನದಲ್ಲಿ ಕುವೆಂಪು ರಚಿತ **'ನನ್ನ ಗೋಪಾಲ'** ನಾಟಕವನ್ನು ವೀರಭದ್ರಪ್ಪ ಎಂ ಚಿಗಟೇರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಪ್ರದರ್ಶಿಸಿದರು.

ಕಾರ್ಯಕ್ರಮದಲ್ಲಿ ಅನ್ವೇಷಕರು ಆರ್ಟ್ಸ್ ಫೌಂಡೇಶನ್ ಸಿದ್ದರಾಜು ಎಸ್ ಎಸ್, ಉಮಾಶಂಕರ್ ಹಾಗೂ ಪ್ರೌಢಶಾಲೆ ಮತ್ತು ಪ್ರಾಥಮಿಕ ಶಾಲೆಯ ಎಲ್ಲಾ ಶಿಕ್ಷಕವೃಂದದವರು, ಪಾಲಕರು ಉಪಸ್ಥಿತರಿದ್ದರು.

# ಮಹಾಭಾರತ ಕಥೆ: ಕೃಷ್ಣ ಕೊಟ್ಟ  ಹಾಗಲಕಾಯಿ ತೀರ್ಥ ಸ್ನಾನದ ಕಥೆ :


ಕುರುಕ್ಷೇತ್ರ ಯುದ್ಧದ ನಂತರ ಎಲ್ಲಿಂದರಲ್ಲಿ ಮೌನ, ನಾಯಿ ಕಾಗೆಗಳ ಸದ್ದು ಕೇಳಿಸುತ್ತಾ ಇತ್ತು.ಎಲ್ಲರನ್ನು ಕಳೆದುಕೊಂಡ ನೋವು ಎಲ್ಲರಲ್ಲೂ ಕಾಣಿಸುತ್ತಾ ಇತ್ತು. ಇದೆಲ್ಲವನ್ನೂ ದೂರದಲ್ಲಿ ನಿಂತು ವೀಕ್ಷಿಸಿದ ಧರ್ಮರಾಯನನ್ನು ಭಾರೀ ಜುಗುಪ್ಸೆ ಆವರಿಸಿಕೊಂಡಿತ್ತು. ಇಂಥಾ ಘೋರ ಹತ್ಯಾಕಾಂಡದ ಪಾಪದ ರಾಶಿಯನ್ನು ಹೊತ್ತುಕೊಂಡಿರುವ ತಲೆಯ ಮೇಲೆ ಸಾಮ್ರಾಜ್ಯಾಧಿಪತಿಯ ಕಿರೀಟವನ್ನು ಸ್ಥಾಪಿಸಿಕೊಳ್ಳುವುದು ಮೊದಲೇ ಧರ್ಮಭೀರುವಾದ ಯುದಿಷ್ಠಿರನಿಗೆ ಸರ್ವಥಾ ಸಮರ್ಥನೀಯವಲ್ಲ ಎನಿಸಿಬಿಟ್ಟಿತು. ಹಾಗಾದರೆ ಈ ಪಾಪವನ್ನು ತೊಳೆದುಕೊಳ್ಳುವುದು ಹೇಗೆ? ಚಿಂತಿಸಿದ. ಕೊನೆಗೊಂದು ನಿರ್ಧಾರಕ್ಕೆ ಬಂದ. ಇಡೀ ಭರತಖಂಡದ ಯಾತ್ರೆಯನ್ನು ಕೈಗೊಂಡು, ಭರತಭೂಮಿಯ ಎಲ್ಲ ನದಿ–ತೀರ್ಥಗಳಲ್ಲಿ ಮುಳುಗೆದ್ದು, ಎಲ್ಲ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ ತನ್ನ ಪಾಪವನ್ನು ತೊಳೆದುಕೊಂಡ ಬಳಿಕವೇ ಪಟ್ಟಾಭಿಷಿಕ್ತನಾಗುವುದೆಂದು ತೀರ್ಮಾನಿಸಿ, ಸೋದರರು ಹಾಗೂ ಪತ್ನಿ ದ್ರೌಪದಿಗೆ ಹೇಳಿದ. ಅಣ್ಣನನ್ನು ಅನುಸರಿಸಿಯೇ ಈವರೆಗೆ ಬಂದಿದ್ದ ಅವರುಗಳು ತಾವೂ ಬರುವುದಾಗಿ ಹೇಳಿದರು. ಸರಿ, ಹೊರಡುವ ಮುನ್ನ ತಮ್ಮ ದಿಗ್ದರ್ಶಿಯಾದ ಶ್ರೀಕೃಷ್ಣನನ್ನು ಭೇಟಿಯಾಗಿ, ಆತನ ಆಶೀರ್ವಾದ ಪಡೆದು ಹೋಗುವುದೆಂದು ನಿರ್ಧರಿಸಿ, ಕೃಷ್ಣನ ಬಳಿ ಬಂದರು. ಅಷ್ಟ ಮಹಿಷಿಯರ ಜತೆ ಲೋಕಾಭಿರಾಮ ಕುಳಿತಿದ್ದ ಕೃಷ್ಣ, ಪಾಂಡವರ ಮಾತನ್ನು ಸಾವಧಾನಚಿತ್ತನಾಗಿ ಆಲಿಸಿ, ಏನನ್ನೂ ಹೇಳದೇ ಧಿಗ್ಗನೆ ಎದ್ದು ಒಳ ನಡೆದ. ಎಲ್ಲರಿಗೂ ದಿಗಿಲು! ತಮ್ಮ ಆರಾಧ್ಯನೇಕೆ ಹೀಗೆ ಮಾಡಿದ? ತಮ್ಮಿಂದ ಏನಾದರೂ ಅಪಚಾರವಾಯಿತೆ? ಪಾಪ ಪರಿಹಾರ ಮಾರ್ಗವನ್ನು ಆತನ ಬಳಿಯೇ ಕೇಳಬೇಕಾಗಿತ್ತೇ? ಹೀಗೆ... ಏನೇನೋ ಯೋಚನೆಗಳು ಸುಳಿಯುತ್ತಿದ್ದಾಗಲೇ ಗಂಭೀರವದನನಾಗಿ ಮರಳಿದ ಕೃಷ್ಣನ ಕೈಯ್ಯಲ್ಲೊಂದು ಪುಟ್ಟ ಹಾಗಲಕಾಯಿ ಇತ್ತು. ಅದನ್ನು ಧರ್ಮರಾಜನ ಕೈಗಿಡುತ್ತಾ, 'ನಿಮ್ಮ ತೀರ್ಥಯಾತ್ರೆಯ ನಿರ್ಧಾರ ಅತ್ಯಂತ ಸೂಕ್ತವಾಗಿದೆ. ಖಂಡಿತಾ ಹೋಗಿಬನ್ನಿ. ಆ ಯುದ್ಧಕ್ಕೆ ಸಾಕ್ಷಿಯಾಗಿದ್ದ ನನಗೂ ನಿಮ್ಮ ಜತೆ ಬರಬೇಕೆಂದೆನಿಸಿತ್ತು.ಆದರೆ ಬಹಳ ಕಾಲದಿಂದ ದ್ವಾರಕೆಯನ್ನು ಬಿಟ್ಟು ಇದ್ದುದ್ದರಿಂದ ಸಾಕಷ್ಟು ರಾಜಕಾರ್ಯಗಳು ಬಾಕಿ ಉಳಿದುಬಿಟ್ಟಿವೆ. ನನ್ನ ಬದಲು ನನ್ನ ಪ್ರತಿನಿಧಿಯಾಗಿ ನಿಮ್ಮ ಜತೆ ಇದನ್ನು ಕಳುಹಿಸುತ್ತೇನೆ. ಇದು ನಾನೇ ಖುದ್ದು ಅತ್ಯಂತ ಪ್ರೀತಿಯಿಂದ ನನ್ನ ತೋಟದಲ್ಲಿ ಬೆಳೆಸಿದ್ದು. ನೀವು ಎಲ್ಲೆಲ್ಲಿ ತೀರ್ಥ ಸ್ನಾನ ಮಾಡುತ್ತೀರೋ, ಅಲ್ಲೆಲ್ಲ ಇದಕ್ಕೂ ಸ್ನಾನ ಮಾಡಿಸಿ. ನೀವು ಮುಳುಗೇಳುವ ಎಲ್ಲ ನದಿಗಳಲ್ಲಿ ಇದನ್ನೂ ಮುಳುಗಿಸಿ ಏಳಿಸಿ. ಎಲ್ಲ ದೇವರ ದರ್ಶನ ಮಾಡಿಸಿ, ಪ್ರಸಾದವನ್ನು ಹಾಕಿಸಿಕೊಂಡು ಬನ್ನಿ. ಆಗಬಹುದೇ?' ಎಂದ. ಪಾಂಡವರು ನಿಟ್ಟುಸಿರು ಬಿಟ್ಟು, ಸಮಾಧಾನ ಹೊಂದಿದರು. ಕೃಷ್ಣನ ಮಾತನ್ನು ಶಿರಸಾವಹಿಸಿ ಪಾಲಿಸುವುದಾಗಿ ಮಾತುಕೊಟ್ಟು ಹಾಗಲವನ್ನು ಜೋಪಾನವಾಗಿ ಜೋಳಿಗೆಯಲ್ಲಿಟ್ಟುಕೊಂಡು ಹೊರಟರು. ವಿಶಾಲ ಭರತ ಖಂಡದ ಉತ್ತರದಿಂದ ದಕ್ಷಿಣದವರೆಗೆ, ಪೂರ್ವದಿಂದ ಪಶ್ಚಿಮದವರೆಗೆ ಸಮಗ್ರ ಪರ್ಯಟನೆ ಮಾಡಿ, ಎಲ್ಲ ಕ್ಷೇತ್ರಗಳನ್ನು ಸಂದರ್ಶಿಸಿ, ಸರ್ವ ತೀರ್ಥಗಳಲ್ಲೂ ಮಿಂದೆಂದು ಪುನೀತಭಾವದಲ್ಲಿ ಮರಳಿದರು. ಎಲ್ಲಿಯೂ ಹಾಗಲವನ್ನು ಮರೆಯದೇ, ಎಲ್ಲೆಡೆ ತಾವು ಏನೆಲ್ಲವನ್ನೂ ಮಾಡಿದರೋ ಅದೆಲ್ಲವನ್ನೂ ಸ್ವತಃ ಕೃಷ್ಣನೇ ಎಂದು ಭಾವಿಸಿ, ಹಾಗಲಕ್ಕೂ ಮಾಡಿಸಿದರು. ಎಲ್ಲ ದೇವರೆದರೂ ಅದನ್ನೂ ಇಟ್ಟು ಪ್ರಸಾದ ಹಾಕಿಸಿಕೊಂಡು ಬಂದಿದ್ದರು.

ಯಾತ್ರೆಯ ಕೊನೆಯಲ್ಲಿ ಪುನಃ ಕೃಷ್ಣನ ಸಾನ್ನಿಧ್ಯಕ್ಕೆ ಬಂದು, ಹಾಗಲವನ್ನು ಅವನ ಕೈಗೆ ಮರಳಿಸಿದರು. ಕೃಷ್ಣ ಕೇಳಿದ– 'ಎಲ್ಲೆಡೆ ಇದಕ್ಕೂ ತೀರ್ಥ ಸ್ನಾನ ಮಾಡಿಸಿದ್ದೀರಲ್ಲಾ, ಎಲ್ಲ ದೇವರ ದರ್ಶನ ಮಾಡಿಸಿದ್ದೀರಲ್ಲಾ?' ಚಾಚೂ ತಪ್ಪದೇ ಪಾಲಿಸಿದ್ದಾಗಿ ಯುಧಿಷ್ಠಿರ ವರದಿ ಒಪ್ಪಿಸಿದ. ಸರಿ ಎಂದು ಸೇವಕರಿಂದ ಒಂದು ಕತ್ತಿ ತರಿಸಿದ ಕೃಷ್ಣ, ಆ ಹಾಗಲವನ್ನು ಆರು ಭಾಗಗಳಾಗಿ ಕತ್ತರಿಸಿದ. ಮತ್ತೆ ಪಾಂಡವರಿಗೆ ಆಶ್ಚರ್ಯ! ಹಾಗಲದ ಒಂದೊಂದು ತುಂಡುಗಳನ್ನು ದ್ರಾಪದಿ ಹಾಗೂ ಐವರು ಪಾಂಡವರಿಗೆ ಹಂಚಿ, ತಿನ್ನಲು ಹೇಳಿದ. ಅದನ್ನು ಬಾಯಿಗಿಟ್ಟುಕೊಂಡ ಅವರೆಲ್ಲರೂ ಮುಖ ಕಿವುಚಿದರು. 'ಯಾಕೆ ಹೀಗೆ ಮುಖ ಮಾಡುತ್ತೀರಿ? ಹಾಗಲ ಸಿಹಿ ಇಲ್ಲವೇ?' ಎಂದು ಕೇಳಿದ ಕೃಷ್ಣ. ಆತನ ಮಾತಿಗೆ ನಗಬೇಕೋ, ಗಂಭಿರವಾಗಿ ಉತ್ತರ ಹೇಳಬೇಕೋ ಅರಿಯದೇ ಗೊಂದಲಕ್ಕೆ ಬಿದ್ದರು ಪಾಂಡವರು, ಇದ್ದುದರಲ್ಲಿ ಹೆಚ್ಚು ಸಲುಗೆ ಇದ್ದ ದ್ರೌಪದಿಯೇ, 'ಅಣ್ಣಾ, ಇದೇನು ಹೀಗೆ ಕೇಳುತ್ತಿರುವೆ? ಹಾಗಲ ಎಂದಾದರೂ ಸಿಹಿ ಇರುತ್ತದೆಯೇ? ಅದರಲ್ಲೂ ಇಷ್ಟು ದಿನ ನೀರಲ್ಲಿ ನೆನೆದ ಹಾಗಲ ಇನ್ನಷ್ಟು ಕಹಿ ಬಿಟ್ಟುಕೊಂಡಿದೆ' ಎಂದಳು. ಹಾಗೇಕೆ? ಇಷ್ಟೆಲ್ಲಾ ದೇವರ ದರ್ಶನ ಮಾಡಿಸಿದ, ತೀರ್ಥ ಸ್ನಾನ ಮಾಡಿಸಿದ ಬಳಿಕ ಹಾಗಲದೊಳಗಿನ ಕಹಿ ಹೋಗಿ ಸಿಹಿಯಾಗಿರಬೇಕಿತ್ತಲ್ಲವೇ?' ಎಂದ ಕೃಷ್ಣ ಕೃಷ್ಣನ ಮಾತಿನ ಒಳಮರ್ಮ ಧರ್ಮಜನಿಗೆ ಥಟ್ಟನೆ ಹೊಳೆಯಿತು. ತಮ್ಮ ಮೂರ್ಖತನಕ್ಕೆ ಕ್ಷಮೆ ಕೇಳಿದ. ನಮ್ಮ ಜೀವನದಲ್ಲೂ ಇದೇ ಆಗಬೇಕಿರುವುದು. ಬದುಕಿನಲ್ಲಿ ಘಟಿಸಿದ ಪಾಪ, ಮಾಡಿದ ಅಪರಾಧಗಳು, ಕೈಗೊಂಡ ಕು–ಕರ್ಮಗಳನ್ನು ಅಂತರ್ಯದ ಪಶ್ಚಾತ್ತಾಪದ ಬೇಗುದಿಯಲ್ಲಿ ಮರಳಿಸಿ, ಸುಟ್ಟುಕೊಳ್ಳಬೇಕು. ನೈಜ ಮರುಗುವಿಕೆಯ ಕಣ್ಣೀರಿನಲ್ಲಿ ತೊಳೆದುಕೊಳ್ಳಬೇಕು. ಸತ್ಕಾರ್ಯ, ಸನ್ನಡತೆ, ಸದಾಚಾರದ ದೃಢ ನಿಶ್ಚಯದ ದರ್ಶನವನ್ನು ಮನಸಿಗೆ ಮಾಡಿಸಿ ಪುನೀತರಾಗಬೇಕೇ ಹೊರತೂ, ಮಾಡಬಾರದ್ದನ್ನೆಲ್ಲ ಮಾಡಿ, ದಿನಗಟ್ಟಲೆ ದೇವರ ಮುಂದೆ ಕುಳಿತಾಕ್ಷಣ, ತೋರುಗಾಣಿಕೆಗಾಗಿ ಯಾರ್ಯಾರಿಗೋ ಏನೇನೋ ದಾನಕೊಟ್ಟೆ ಎಂದು ಬೀಗಿದಾಕ್ಷಣ, ಸಂಭಾವಿತನ ಪೋಸು ಕೊಟ್ಟಾಕ್ಷಣ, ದೊಡ್ಡ ದೊಡ್ಡ ದೇಗುಲಗಳ ದೇವರಿಗೆ ಕೋಟ್ಯಂತರ ರುಪಾಯಿಗಳ ಕಾಣಿಕೆ ಕೊಟ್ಟಾಕ್ಷಣ ನಾವು ಮನುಷ್ಯರೆನಿಸಿಕೊಳ್ಳುವುದಿಲ್ಲ. ಅಂತರ್ಯದಲ್ಲಿ ಸಿಹಿಯಾಗಿರುವವರಿಗೆ ಯಾವ ದೇವರು, ಯಾವ ಧರ್ಮ, ಯಾವ ಆಚರಣೆಯೂ ಅಗತ್ಯ ಇಲ್ಲ.


**ಸಂಗ್ರಹ:ಲಿಂಗರಾಜ ಗಾಜಿ ಸ.ಶಿ**

# ಶಿವಣ್ಣ ಚಿಗಟೇರಿ ನರ್ಸರಿ ಮಕ್ಕಳ ಚಟುವಟಿಕೆಗಳ ಚಿತ್ರಪಟಗಳು















# ಎಸ್.ಜೆ.ಜೆ.ಇ ಸೊಸೈಟಿಯಲ್ಲಿ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ
# ಹಾಲು ಮತ್ತು ಬಿಸ್ಕತ್ ವಿತರಣೆ







ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆ, ಅಕ್ಕಮಹಾದೇವಿ ಪ್ರೌಢಶಾಲೆ ಹಗೂ ಗುರುಬಸಮ್ಮ ವಿ. ಚಿಗಟೇರಿ ಪ್ರೌಢಶಾಲೆ ಆಂಗ್ಲಮಾಧ್ಯಮದ ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಸಾಯಂಕಾಲ ತೆಗೆದುಕೊಳ್ಳುವ ವಿಶೇಷ ತರಗತಿಗಳಿಗೆ ಹಾಜರಾದ ವಿದ್ಯಾರ್ಥಿಗಳಿಗೆ ಸಂಸ್ಥೆಯ ವತಿಯಿಂದ , ಶಾಲೆಯ ಹಳೆಯ ವಿದ್ಯಾರ್ಥಿಗಳು ಹಾಗೂ ದಾನಿಗಳಿಂದ ಬಿಸ್ಕೆಟ್ ಮತ್ತು ಹಾಲನ್ನು ವಿತರಿಸಲಾಗುತ್ತಿದೆ